# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/121/12-13 ದಿನಾಂಕ : 12-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಲಿಂಗಮೂರ್ತಿ ತಂದೆ ಹೊನ್ನೂರಪ್ಪ,<br>ವಾರ್ಡ್ ನಂ 4, ಇಂದಿರಾ ನಗರ,<br>ಕುಡುತಿನಿ ಗ್ರಾಮ, ಬಳ್ಳಾರಿ ತಾಲ್ಲೂಕು<br><br>**(ಶ್ರೀ ಪಿ. ಮಕ್ಬೂಲ್ ಬಾಷಾ ಮತ್ತು ಎಂ ರವಿಕುಮಾರ, ವಕೀಲರು, ಬಳ್ಳಾರಿ)** | 1. ವಿಶೇಷ ತಹಶೀಲ್ದಾರರು, ಕುರುಗೋಡು<br>2. ಕಂದಾಯ ನಿರೀಕ್ಷಕರು, ಕುರುಗೋಡು<br>3. ಗ್ರಾಮಲೆಕ್ಕಾಧಿಕಾರಿಗಳು, ಕುಡುತಿನಿ<br>4. ಹೊನ್ನೂರ ಸ್ವಾಮಿ ತಂದೆ ದುಗ್ಗಪ್ಪ, ಕುರುವಳ್ಳಿ ಗ್ರಾಮ, ಬೊಮ್ಮನಹಾಳು ಮಂಡಲ, ರಾಯದುರ್ಗ ತಾಲ್ಲೂಕು, ಅನಂತಪುರ ಜಿಲ್ಲೆ<br>**R4- ಶ್ರೀ ಎ ಮೋಹನ್ ರೆಡ್ಡಿ, ವಕೀಲರು, ಬಳ್ಳಾರಿ** |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕುಡುತಿನಿ | 1082/ಎ | 2.32 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ ಆರ್ ನಂ 594/05-06 ದಿನಾಂಕ 22/07/2006 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 30-10-2012, 18-12-2012, 22-10-2013, 06-11-2013, 10-12-2013, 27-12-2013, 06-11-2015, 03-06-2016, ಮತ್ತು 12-08-2016, ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 12-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕುಡುತಿನಿ ಗ್ರಾಮದ ಸ.ನಂ 1082/ಎ ವಿಸ್ತೀರ್ಣ: 2.32 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ ಆರ್ ನಂ 594/05-06 ದಿನಾಂಕ 22-07-2006 ರನ್ವಯ ಪ್ರತಿವಾದಿ 4 ರವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಿರುವುದರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಪ್ರಸ್ತಾಪಿತ ಜಮೀನುಗಳ ವಿವಾದಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ವಿವಾದಾಸ್ಪದ ಜಮೀನು ಸ.ನಂ 1082/ಎ ರ ಒಟ್ಟು ವಿಸ್ತೀರ್ಣ 12.63 ಎಕರೆ ಇದ್ದು ಇದು ಅಪೀಲುದಾರರ ಮೂಲ ಆಸ್ತಿಯಾಗಿದ್ದು, ಇದರಲ್ಲಿ 12.31 ಎಕರೆ ಜಮೀನ್ನು ಮಾರಾಟ ಮಾಡಲಾಗಿದ್ದು, ಬಾಕಿ 00.32 ಎಕರೆ ಜಮೀನು ಮನವಿದಾರರಿಗೆ ಸೇರಬೇಕಾಗಿರುತ್ತದೆ. ಪ್ರತಿವಾದಿ (4) ರವರಿಗೆ ಒಟ್ಟು ಜಮೀನಿನಲ್ಲಿ 2.00 ಎಕರೆ ಮಾರಾಟ ಮಾಡಲಾಗಿದ್ದು ಆದರೆ ಪಹಣಿಯಲ್ಲಿ ಪ್ರತಿವಾದಿ (4) ರವರ ಹೆಸರಿಗೆ 2.32 ಎಕರೆ ನಮೂದಾಗಿರುವುದು ಕಂಡುಬಂದಿರುತ್ತದೆ. ಕಾರಣ 0.32 ಎಕರೆ ಜಮೀನನ್ನು ಮೂಲ ಮಾಲಿಕನಿಗೆ ಉಳಿಸಿಕೊಡುವಂತೆ ಮನವಿದಾರರು ಕೋರಿರುತ್ತಾರೆ. ಈ ಕುರಿತು ಕೆಳಕಂಡ ಆದೇಶ .

ಮುಂದಿನಪುಟಕ್ಕೆ....